


## ಮಾಂಸಭಕ್ಷಕ ಬ್ಯಾಕ್ಟೀರಿಯ

ಮಾಂಸವನ್ನೇ ತಿನ್ನುವ ಭೀಕರ ಬ್ಯಾಕ್ಟೀರಿಯ ಅಮೆರಿಕದಲ್ಲಿ ಪತ್ತೆಯಾಗಿದೆ. ಇದು ಹೇಗೆ ಮತ್ತು ಎಲ್ಲಿಂದ ಪಸರಿಸುತ್ತದೆ ಎಂಬುದರ ಮೇಲೆ ಅಧ್ಯಯನ ಇನ್ನೂ ನಡೆಯುತ್ತಿದೆ. ಆದರೆ ಮಹಿಳೆಯೊಬ್ಬಳಿಗೆ ಶಸ್ತ್ರಕ್ರಿಯೆ ಮೂಲಕ ಹೆರಿಗೆಯಾದ ನಂತರ ಆ ಗಾಯದ ಬಳಿ ಚರ್ಮ ಕಿತ್ತು ಹೋಗಿದ್ದು ಕಂಡು ಬಂತು. ಕ್ರಮೇಣ ಅದು ದೇಹದ ಸಣ್ಣ ಕರುಳು, ದೊಡ್ಡ ಕರುಳಿಗೆ ಕೂಡಾ ವ್ಯಾಪಿಸಿತು. ಐದು ವರ್ಷಗಳ ಕಾಲ ಚಿಕಿತ್ಸೆ ಪಡೆದ ನಂತರ ಆ ಮಹಿಳೆಗೆ ಸಣ್ಣ ಕರುಳು, ದೊಡ್ಡ ಕರುಳನ್ನು ಕೃತಕವಾಗಿ ಜೋಡಿಸಲಾಯಿತು. ಇನ್ನಿಬ್ಬರು ಮಹಿಳೆಯರಿಗೆ ಕೂಡಾ ಇದು ತಗುಲಿದ್ದು ಪತ್ತೆಯಾಗಿದೆ.

## ಮಧುಮೇಹ ಮತ್ತು ರೆಟಿನೊಪಥಿ

40 ವರ್ಷ ವಯಸ್ಸಿಗಿಂತ ಮೇಲ್ಪಟ್ಟ ಮಧುಮೇಹಿಗಳಲ್ಲಿ ಶೇ. 30ರಷ್ಟು ಮಂದಿ ಕಣ್ಣಿಗೆ ಸಂಬಂಧಿಸಿದ ಸಮಸ್ಯೆಗಳಿಂದ ನರಳುತ್ತಿದ್ದಾರೆ. ಇವರಲ್ಲಿ ಶೇ. 4ರಷ್ಟು ಮಂದಿಗೆ ಇದು ಗಂಭೀರವಾದ ಸಮಸ್ಯೆಗೆ ತಿರುಗುವ ಸಾಧ್ಯತೆ ಅಧಿಕ.

ಕಣ್ಣಿನ ರೆಟಿನಾವನ್ನು ಧಕ್ಕೆಗೊಳಿಸುವ ಮಧುಮೇಹ ಅಂಧತ್ವವನ್ನೇ ಉಂಟು ಮಾಡಬಲ್ಲದು. ಮಹಿಳೆಯರಿಗೆ ಹೋಲಿಸಿದರೆ ಇದು ಪುರುಷರಲ್ಲೇ ಅಧಿಕ. ಮಧುಮೇಹ ರೆಟಿನೊಪಥಿ ಎನ್ನಲಾಗುವ ಈ ಸಮಸ್ಯೆ ಬರದಂತೆ ತಡೆಯಲು ಮಧುಮೇಹ ನಿಯಂತ್ರಣವಲ್ಲದೇ ಕೊಲೆಸ್ಟ್ರಾಲ್ ಹಾಗೂ ಅಧಿಕ ರಕ್ತದೊತ್ತಡವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದೂ ಮುಖ್ಯ.

## ಸಂವಹನ ಸಮಸ್ಯೆ

ವೈದ್ಯರು ಮತ್ತು ರೋಗಿಗಳ ಮಧ್ಯೆ ಸಂವಹನದ ಸಮಸ್ಯೆಯಿಂದಾಗಿ ಸಮಸ್ಯೆಗಳು ಸೃಷ್ಟಿಯಾಗುವುದು ಅಧಿಕವಾಗಿದೆ. ಈ ನಿಟ್ಟಿನಲ್ಲಿ ಅಮೆರಿಕದ ಸಂಸ್ಥೆಯೊಂದು ನಡೆಸಿದ ಸಂಶೋಧನೆ ಬೆಳಕು ಚೆಲ್ಲಿದೆ.

ಹೆಚ್ಚಿನ ರೋಗಿಗಳಿಗೆ ತಮ್ಮ ರೋಗ, ಅದರ ಪತ್ತೆ, ಪ್ರಯೋಗಾಲಯದಲ್ಲಿ ರಕ್ತ, ಎಕ್ಸ್‌ರೇ ಮತ್ತಿತರ ತಪಾಸಣೆಗಳ ಫಲಿತಾಂಶದ ಬಗ್ಗೆ ಗೊತ್ತಿರುವುದಿಲ್ಲ. ವೈದ್ಯರು ವೈದ್ಯಕೀಯ ಭಾಷೆಯಲ್ಲಿ ಹೇಳುವುದು ರೋಗಿಗಳಿಗೆ ಅರ್ಥವಾಗುವುದು ಕಡಿಮೆ. ಔಷಧವನ್ನು ಸೇವಿಸುವ ಬಗ್ಗೆಯೂ ಸರಿಯಾದ ಮಾಹಿತಿ ಇರುವುದಿಲ್ಲ. ಹೀಗಾಗಿ ಇಂಥ ಸಂದರ್ಭಗಳಲ್ಲಿ ಗೊಂದಲ ಸೃಷ್ಟಿಯಾಗುತ್ತದೆ.

## ಧಡೂತಿ ಯುವಕರಿಗೆ ಎಚ್ಚರಿಕೆ

ದಪ್ಪ, ಜಾಸ್ತಿ ಇರುವ ಯುವಕರಲ್ಲಿ ವೀರ್‍ಯಾಣು ಸಂಖ್ಯೆ ಕಡಿಮೆ ಇರುವುದು ಅಧ್ಯಯನದಿಂದ ಕಂಡು ಬಂದಿದೆ. ಇರುವ ವೀರ್‍ಯಾಣುಗಳಲ್ಲಿ ಕೂಡಾ ಚಲನಶೀಲತೆ ಕಡಿಮೆ ಇರುತ್ತದೆ. ಇದರಿಂದ ಸಂತಾನಹೀನತೆ ಸಾಧ್ಯತೆ ಅಧಿಕ. ಇದಲ್ಲದೇ ವಯಸ್ಸಾದಂತೆ ವೀರ್‍ಯಾಣುಗಳ ಗುಣಮಟ್ಟ ಕಡಿಮೆಯಾಗುತ್ತದೆ. ಇದಕ್ಕೆ ಕೂಡಾ ಸಂಗ್ರಹವಾಗುವ ಕೊಬ್ಬು ಕಾರಣ ಎಂದಿದೆ ಅಧ್ಯಯನ.

## ಸಂತಾನಹೀನತೆ

ಸಂತಾನೋತ್ಪತ್ತಿಗಾಗಿ ಚಿಕಿತ್ಸೆಯನ್ನು ತೆಗೆದುಕೊಳ್ಳುವ ದಂಪತಿಯ ಮಗು ಪಡೆಯುವ ಸಾಧ್ಯತೆ 2–3 ಯತ್ನಗಳ ನಂತರ ಕಡಿಮೆಯಾಗುತ್ತ ಹೋಗುತ್ತದೆ. 'ಫರ್ಟಿಲಿಟಿ ಆ್ಯಂಡ್ ಸ್ಟರಿಲಿಟಿ' ಜರ್ನಲ್‌ನಲ್ಲಿ ಈ ಬಗ್ಗೆ ವಿವರ ನೀಡಲಾಗಿದೆ.

ಅಂಡಾಣು ಸಮಸ್ಯೆ ಇರುವ ಮಹಿಳೆಯರಿಗೆ ಅಂಡಾಣು ಬಿಡುಗಡೆ ಮಾಡುವಂತೆ ಅಂಡಾಶಯ ಪ್ರಚೋದಿಸುವ ಔಷಧಿ ನೀಡಲಾಗುತ್ತದೆ. ಇನ್ನೊಂದು ಇಂಟ್ರಾ ಯುಟೆರೈನ್ ಇನ್‌ಸೆಮಿನೇಶನ್ ಅಥವಾ ಕೃತಕ ಗರ್ಭಧಾರಣೆ. ಅಂದರೆ ವೀರ್‍ಯಾಣುವನ್ನು ಮಹಿಳೆಯ ಗರ್ಭಾಶಯದಲ್ಲಿ ಕ್ಯಾಥೆಟರ್ ಮೂಲಕ ಸೇರಿಸುವುದು. ಇನ್ನೊಂದು ಪ್ರನಾಳ ಶಿಶು. ಇವುಗಳಲ್ಲಿ ಯಾವುದಾದರೂ ಒಂದೇ ಚಿಕಿತ್ಸೆಯನ್ನು 2–3 ಬಾರಿ ತೆಗೆದುಕೊಂಡ ಮಹಿಳೆಯರಲ್ಲಿ ಗರ್ಭಧಾರಣೆ ಸಾಧ್ಯತೆ ಶೇ. 28ರಷ್ಟು ಮಾತ್ರ ಎಂಬುದು ಕಂಡು ಬಂದಿದೆ. ಪ್ರನಾಳ ಶಿಶು ಪಡೆಯುವ ದಂಪತಿ ಎರಡು ಬಾರಿ ಮಾತ್ರ ಯತ್ನಿಸಬಹುದು.

■ ಸುಧಿ




ಚಿಂತಿತರಾಗಿದ್ದೀರಾ
ಆ ಹೆಚ್ಚುವರಿ ಕಿಲೋಗಳ ಬಗ್ಗೆ!

SCHWABE

ಬಳಸಿ
ಶ್ವಾಬ್‌ರವರ
ಫೈಟೋಲಕ್ಕ ಬೆರ್ರಿ
ಮಾತ್ರೆಗಳು

ಶ್ವಾಬ್ ಫೈಟೋಲಕ್ಕ ಬೆರ್ರಿ ಮಾತ್ರೆಗಳನ್ನು ಸೇರಿಸಿಕೊಳ್ಳಿ ಸಮತೋಲನ ಆಹಾರ ಮತ್ತು ಸಾಧಾರಣ ವ್ಯಾಯಾಮದೊಂದಿಗೆ. ತೂಕ ಕಡಿಮೆ ಮಾಡಿಕೊಳ್ಳುವುದು ಈಗ ಬಹಳ*.

- ಯಾವುದೇ ಅಡ್ಡ ಪರಿಣಾಮಗಳಿಲ್ಲ, ಸಂಪೂರ್ಣ ಸುರಕ್ಷಿತ
- ಎಲ್ಲಾ ಪ್ರಮುಖ ಹೋಮಿಯೋಪಥಿ ಔಷಧ ಅಂಗಡಿಗಳಲ್ಲಿ ಲಭ್ಯವಿದೆ

ಮಹಿಳೆ ಮತ್ತು ಪುರುಷರಿಬ್ಬರಲ್ಲೂ ಪರಿಣಾಮಕಾರಿ




ಹೆಚ್ಚಿನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
ಡಾ.ವಿಲ್ಮರ್ ಶ್ವಾಬ್ ಇಂಡಿಯಾ ಪ್ರೈ.ಲಿ.
ಗ್ರಾಹಕ ಸೇವೆ ಸಂಖ್ಯೆ : 0120-4016500 ಅಥವಾ
www.schwabeindia.com ಗೆ ಲಾಗ್ ಆನ್ ಮಾಡಿ
'SCHSLIM' ಎಂದು 575758 ಸಂಖ್ಯೆಗೆ ಎಸ್‌ಎಂಎಸ್ ಮಾಡಿ
Karnataka Ph: 080-2346199, 09845046286, 09880907512, 09341123199, 09945423916

*ನಿಮ್ಮ ಹೋಮಿಯೋಪಥಿ ವೈದ್ಯರನ್ನು ಸಂಪರ್ಕಿಸಿ

ಶ್ವಾಬ್ – ಜರ್ಮನಿ ಯಿಂದ ವಿಶ್ವದ ದೊಡ್ಡ ಮತ್ತು ವಿಶ್ವಾಸಾರ್ಹ ಹೋಮಿಯೋಪಥಿ ಔಷಧ ತಯಾರಕರು